ಸಿಡಬ್ಲ್ಯೂಃ 1

ಪಿಡಬ್ಲ್ಯೂಃ 1

ಇಂದು ದಿನಾಂಕಃ 12.07.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಪಾಟೀ ಸವಾಲುಃ** 2 ನೇ ಆರೋಪಿ ಪರ ಶ್ರೀ. ಯು.ಬಿ.ಜೆ. ವಕೀಲರಿಂದಃ

1. ನನ್ನ ಗಂಡನ ಮನೆ ಚಿಕ್ಕಯಡಚಿ. ನನ್ನ ತವರೂರು ಕಡೂರು. ನನ್ನ ಗಂಡನ ಮನೆಯಿಂದ ತವರು ಮನೆಗೆ ಯಾವ ದಿನ ಹೋಗಿರುತ್ತೇನೆ ಎಂದು ನನಗೆ ನೆನಪಿಲ್ಲ. ಮುಂದುವರೆದು ನನ್ನ ತಮ್ಮ ಕರೆ ಮಾಡಿ ಕರೆಸಿದ್ದನು ಎಂದು ನುಡಿಯುತ್ತಾರೆ. ಆ ದಿನ ಬೆಳಿಗ್ಗೆ 7-00 ಗಂಟೆಗೆ ಹೋಗಿರುತ್ತೇನೆ. ಅಂದು ಕಡೂರಿನಿಂದ ಅಬಲೂರಿಗೆ ಪ್ರಯಾಣಿಸಿದ ಆಟೋ ನಂಬರ ನನಗೆ ನೆನಪಿಲ್ಲ. ಸದರಿ ಆಟೋವಿನ ಮಾಲೀಕ ಬಸವರಾಜ, ಕಡೂರಿನವರು. ಸದರಿ ಬಸವರಾಜರವರು ಆಟೋವನ್ನು ಚಲಾಯಿಸುತ್ತಿದ್ದರು. ಸದರಿ ಆಟೋ ಪಾಸೆಂಜರ್ ಆಟೋ. ಸದರಿ ಆಟೋದಲ್ಲಿ 13 ಜನ ಪ್ರಯಾಣಿಸಿದ್ದೆವು. ನಾನು ಮಧ್ಯದ ಸೀಟ್‌ನಲ್ಲಿ ಕುಳಿತಿದ್ದೆ.

2. ಅಬಲೂರು ತಲುಪಿದಾಗ ಮಧ್ಯಾಹ್ನ 1-00 ಗಂಟೆಯಾಗಿತ್ತು. ನನ್ನ ತಮ್ಮನ ಮಗನ ತೊಟ್ಟಿಲು ಕಾರ್ಯಕ್ರಮ ಮುಗಿದಾಗ ಸಂಜೆ 4-00 ಗಂಟೆ ಆಗಿತ್ತು. ಅಬಲೂರಿನಿಂದ ಕೋಡ, ರಟ್ಟೀಹಳ್ಳಿ ಮಾರ್ಗವಾಗಿ ಕಡೂರಿಗೆ ಹೋಗಿರುತ್ತೇವೆ. ಆಟೋವಿನಲ್ಲಿ 3 ಜನ ಮಾತ್ರ ಕುಳಿತುಕೊಳ್ಳಬಹುದು ಎಂದರೆ ಸರಿ. ನಾವು 13 ಜನರೆಲ್ಲರೂ ಆಟೋದಲ್ಲೆ ಕುಳಿತುಕೊಂಡಿದ್ದೆವು. ಸದರಿ ಆಟೋ ಎಷ್ಟು ಕಿ.ಮೀ. ವೇಗವಾಗಿ ಹೋಗುತ್ತಿತ್ತು ಎಂದು ನನಗೆ ಗೊತ್ತಿಲ್ಲ ಆದರೆ ಅತೀ ವೇಗವಾಗಿ ಚಲಾಯಿಸುತ್ತಿದ್ದ. 3 ಜನ ಕುಳಿತುಕೊಂಡು ಹೋಗುವ ಆಟೋದಲ್ಲಿ 10 ಜನ ಹೆಚ್ಚಿಗೆ ಆಗಿದ್ದರಿಂದ ಚಾಲಕನಿಗೆ ನಿಯಂತ್ರಣ ಸಿಗಲಿಲ್ಲ ಎಂದರೆ ಸರಿಯಲ್ಲ

3. ಅತೀ ವೇಗವಾಗಿ ಚಲಾಯಿಸಿದ್ದರಿಂದ ಆಟೋ ಪಲ್ಟಿಯಾಗಿರುತ್ತದೆ. ನನಗೆ, ನನ್ನ ತಮ್ಮ ಹಾಗೂ ನನ್ನ ಅತ್ತೆಗೆ ಗಾಯಗಳಾಗಿದ್ದವು ಎಂದರೆ ಸರಿ. ನಾವು ಆಂಬ್ಯುಲೆನ್ಸ್ ಮೂಲಕ ರಟ್ಟೀಹಳ್ಳಿ ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತೇವೆ. ಕಡೂರಿನಿಂದ ಅಬಲೂರು ಎಷ್ಟು ಕಿ.ಮೀ. ಅಂತರದಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲ. ಕಡೂರಿನ ರಟ್ಟೀಹಳ್ಳಿ 13 ಕಿ.ಮೀ. ದೂರದಲ್ಲಿದೆ ಎಂದರೆ ಸರಿ. ರಟ್ಟೀಹಳ್ಳಿಯಿಂದ ಕೋಡ 15 ಕಿ.ಮೀ. ದೂರದಲ್ಲಿದೆ ಎಂದರೆ ಸರಿ. ಕೋಡದಿಂದ ಅಬಲೂರು 5 ಕಿ.ಮೀ. ದೂರದಲ್ಲಿದೆ ಎಂದರೆ ಸರಿ. ಅಪಘಾತವಾದಾಗ ಸಂಜೆ 6-00 ಗಂಟೆಯಾಗಿತ್ತು. ರಟ್ಟೀಹಳ್ಳಿ ಸರ್ಕಾರಿ ಆಸ್ಪತ್ರೆಯಿಂದ ಹೆಚ್ಚಿನ ಚಿಕಿತ್ಸೆಗಾಗಿ ದಾವಣಗೆರೆಗೆ ಹೋಗುವಾಗ ನನ್ನ ಅತ್ತೆ ತೀರಿ ಹೋಗಿರುತ್ತಾರೆ ಎಂದರೆ ಸರಿ.

4. ಫಿರ್ಯಾದಿ ಬರೆಯಲು ನಾನೇ ಮಾಹಿತಿ ನೀಡಿದ್ದು, ಅದನ್ನು ಪೊಲೀಸರು ಬರೆದಿರುತ್ತಾರೆ. ಫಿರ್ಯಾದಿಯಲ್ಲಿ ಏನು ಬರೆದಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಾನು ಫಿರ್ಯಾದಿ ಬರೆಸುವಾಗ ಆಟೋ ಚಾಲಕ ಬಸವರಾಜ ಅಸುಂಡಿಯವರ ಹೆಸರನ್ನು ಹೇಳಿರುತ್ತೇನೆ. ಫಿರ್ಯಾದಿಯಲ್ಲಿ ಆಟೋ ಚಾಲಕನ ಹೆಸರು ನನಗೆ ಗೊತ್ತಿಲ್ಲ, ನೋಡಿದರೆ ಗುರುತಿಸುತ್ತೇನೆ ಎಂದು ಹೇಳಿ ಬರೆಸಿರುವುದಿಲ್ಲ. ಫಿರ್ಯಾದಿ ಕೊಟ್ಟಾಗ ರಾತ್ರಿ 9-00 ಗಂಟೆ ಆಗಿತ್ತು. ಆಗಲೇ ಸಹಿ ಮಾಡಿರುತ್ತೇನೆ. ನ್ಯಾಯಾಲಯದ ಮುಂದೆ ಇರುವ ಆರೋಪಿ 2 ರವರನ್ನು ಇದೇ ಮೊದಲ ಬಾರಿಗೆ ನೋಡಿರುತ್ತೇನೆ.

5. ಅಪಘಾತ ಸ್ಥಳ ಕುಮದ್ವತಿ ನದಿಯ ಸೇತುವೆ ಮೇಲೆ ಎಂದರೆ ಸರಿ. ಸದರಿ ಸ್ಥಳದಲ್ಲಿ ಆಟೋ ಒಂದನ್ನು ಬಿಟ್ಟು ಬೇರೆ ಯಾವುದೇ ವಾಹನಗಳು ಇರಲಿಲ್ಲ ಎಂದರೆ ಸರಿ. ಸದರಿ ಸೇತುವೆ ಮೇಲೆ ಎರಡು ಕಡೆ ಹಂಪ್ಸ್‌ಗಳು ಇವೆ ಎಂದರೆ ಸರಿ. ಆಟೋ 1 ನೇ ಹಂಪ್ಸ್ ದಾಟಿ ಪಲ್ಟಿಯಾಗಿರುತ್ತದೆ. ದೂರನ್ನು ನೀಡಿದ ನಂತರ ಮತ್ತೆ ಪೊಲೀಸ್ ಠಾಣೆಗೆ ಹೋಗಿಲ್ಲ ಎಂದರೆ ಸಾಕ್ಷಿಯು ಪಂಚನಾಮೆಗೆ ಘಟನಾ ಸ್ಥಳ ತೋರಿಸಲು ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ಮತ್ತೆ ಹೋಗಿರುವುದಿಲ್ಲ. ನಂತರ ನಾನು ಯಾವುದೇ ಮರು ಹೇಳಿಕೆ ನೀಡಿರುವುದಿಲ್ಲ.

6. ಅಪಘಾತವು 1 ನೇ ಆರೋಪಿಯ ತಪ್ಪಿನಿಂತ ಆಗಿರುತ್ತದೆ ಎಂದರೆ ಸರಿ. ಆರೋಪಿ 2 ಹಾಗೂ ಅಪಘಾತಕ್ಕೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿ. ನಾವು ಅಪಘಾತ ಪರಿಹಾರಕ್ಕೆ ಅರ್ಜಿ ಸಲ್ಲಿಸಿರುತ್ತೇವೆ ಎಂದರೆ ಸರಿ. ಆರೋಪಿ 2 ರವರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲುಃ** 1 ನೇ ಆರೋಪಿ ಪರ ಶ್ರೀ. ವಿ.ವಿ.ಎಮ್. ವಕೀಲರಿಂದಃ

ನಾನು 2 ನೇ ಆರೋಪಿಯೊಂದಿಗೆ ಮಿಲಾಪೆಯಾಗಿ 1 ನೇ ಆರೋಪಿಯ ವಿರುದ್ಧ ಇಂದು ಪಾಟೀ ಸವಾಲು ನೀಡಿರುತ್ತೇನೆ ಎಂದರೆ ಸರಿಯಲ್ಲ. 1 ನೇ ಆರೋಪಿಯ ತಪ್ಪಿನಿಂದ ಅಪಘಾತ ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

Sd/-

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.